ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ. ಎಂ. ಎಫ್. ಸಿ.ರವರ ನ್ಯಾಯಾಲಯ, ಮಡಿಕೇರಿ.

**ಸಿ.ಸಿ.ನಂಃ 91/25**

ಪಿಡಬ್ಲ್ಯುಃ – 4

ಸಿಡಬ್ಲ್ಯುಃ – 5

ದಿನಾಂಕಃ 29.10.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

| | |
|---|---|
| ಸಾಕ್ಷಿದಾರರ ಹೆಸರು | – ಯೋಗೇಶ್ |
| ತಂದೆಯ ಹೆಸರು | – ಶಿವರಾಂ ಕೆ |
| ವಯಸ್ಸು | – 30 ವರ್ಷ |
| ವೃತ್ತಿ | – ಖಾಸಗಿ ಉದ್ಯೋಗಿ |
| ವಾಸಸ್ಥಳ | – ಮೈಸೂರು |

ಮುಖ್ಯ ವಿಚಾರಣೆಃ ಮಾನ್ಯ ಎಪಿಪಿ ಯವರಿಂದಃ–

ಚಾಸಾ–1, 2 ಮತ್ತ 6 ನನಗೆ ಗೊತ್ತು. ಚಾಸಾ–3 ಮತ್ತು 4 ನನಗೆ ಗೊತ್ತಿಲ್ಲ. ಮೃತ ಅನಂತ ಲಕ್ಷ್ಮಿ ನನ್ನ ತಾಯಿ. ದಿಃ 06.09.2024 ರಂದು ಸಂಜೆ 7–15 ಗಂಟೆ ಸುಮಾರಿಗೆ ನಾನು ಮೈಸೂರಿನಲ್ಲಿ ಇದ್ದಾಗ ನನ್ನ ಮೊಬೈಲ್ ಗೆ ನನ್ನ ಸಂಬಂಧಿಕರು ಕರೆ ಮಾಡಿ ಭಾಗಮಂಡಲ–ಮಡಿಕೇರಿ ರಸ್ತೆಯಲ್ಲಿ ಬಸ್ ನಿಲ್ದಾಣದ ಹತ್ತಿರ ನನ್ನ ತಾಯಿ ಬಿದ್ದಿರುವುದಾಗಿ ಮತ್ತು ಗ್ರಾಮಸ್ಥರು ಮಡಿಕೇರಿಯ ಜಿಲ್ಲಾ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಸೇರಿಸಿರುವುದಾಗಿ ತಿಳಿಸಿದರು. ರಾತ್ರಿ ಸುಮಾರು 10.00 ಗಂಟೆಗೆ ನಾನು ಮಡಿಕೇರಿಯ ಜಿಲ್ಲಾ ಆಸ್ಪತ್ರೆಗೆ ಹೋಗಿ ನನ್ನ ತಾಯಿಯನ್ನು ನೋಡಿರುತ್ತೇನೆ, ನನ್ನ ತಾಯಿಯ ಬೆನ್ನಿಗೆ ಏಟಾಗಿರುತ್ತದೆ. ಮಡಿಕೇರಿ ಆಸ್ಪತ್ರೆಯ ವೈದ್ಯರು ಇಲ್ಲಿ ಆಗುವುದಿಲ್ಲ ಮೈಸೂರಿಗೆ ಕರೆದುಕೊಂಡು ಹೋಗಿ ಎಂದು ನನಗೆ ಹೇಳಿದರು. ನಾನು ವಾಪಾಸ್ಸು ನನ್ನ ಮನೆಗೆ ಬಂದಾಗ ಅಪಘಾತದ ಸ್ಥಳ ನೋಡಿರುತ್ತೇನೆ, ಅಲ್ಲಿ ನನ್ನ ತಾಯಿಯ ಒಂದು ಚಪ್ಪಲಿ ಬಿದ್ದಿತ್ತು ಮತ್ತು ಹೂಗಳು ಬಿದ್ದಿದ್ದವು, ವಾಹನದ ಫೈಬರ್ ಪೀಸ್ ಗಳು, ಇಂಡಿಕೇಟರ್ ಬಿದ್ದಿತ್ತು. ನಾನು ನನ್ನ ತಂದೆಯನ್ನು ಮನೆಯಲ್ಲಿ ಬಿಟ್ಟು, ವಾಪಾಸ್ಸು ಮಡಿಕೇರಿಗೆ ಬಂದು ನನ್ನ ತಾಯಿಯನ್ನು ಮೈಸೂರಿಗೆ ಚಿಕಿತ್ಸೆಗೆಂದು

ಕರೆದುಕೊಂಡು ಹೋದೆ. ನಾನು ಚಾಸಾ–1 ರವರಿಗೆ ವಿಚಾರ ತಿಳಿಸಿ ಪ್ರಕರಣದ ಬಾಪ್ತು ದೂರು ನೀಡುವಂತೆ ತಿಳಿಸಿದೆ. ದಿಃ09.09.2024 ರಂದು ನನ್ನ ತಾಯಿ ಹೃದಯಾಘಾತದಿಂದ ಮೃತಪಟ್ಟಿರುತ್ತಾರೆ. ನನ್ನ ತಾಯಿಯ ಬೆನ್ನು ಮೂಳೆ, ಪಕ್ಕೆಲುಬುಗಳು, ಮೆದುಳಿಗೆ ಗಾಯಗಳಾಗಿ ಇಂಟರ್ನಲ್ ಬ್ಲಿಡಿಂಗ್ ಆಗಿ ಅವರು ಮೃತ ಪಟ್ಟರು. ನನ್ನ ತಾಯಿ ಮೃತ ಪಟ್ಟ ನಂತರ ಮತ್ತೆ ನಾನು ಚಾಸಾ–1 ರವರಿಗೆ ವಿಚಾರ ತಿಳಿಸಿ ಪೊಲೀಸರಿಗೆ ನನ್ನ ತಾಯಿ ಮೃತ ಪಟ್ಟ ಬಗ್ಗೆ ದೂರು ನೀಡುವಂತೆ ಹೇಳಿದೆ. ಸ್ಥಳದಲ್ಲಿ ಬಿದ್ದಿದ್ದ ಪೈಬರ್ ಪೀಸುಗಳನ್ನು ನಾನು ಮನೆಗೆ ತೆಗೆದುಕೊಂಡು ಹೋಗಿ ಇಟ್ಟಿದ್ದೆ, ನಂತರ ಅದನ್ನು ನಾನು ಪೊಲೀಸ್ ಠಾಣೆಗೆ ತೆಗೆದುಕೊಂಡು ಹೋಗಿ ಕೊಟ್ಟೆ. ಪೊಲೀಸರು ಮಹಜರು ಮಾಡಿರುತ್ತಾರೆ.

ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಲಾಗಿದ್ದು, ಅದು ಅಮಾನತ್ತು ಮಹಜರಾಗಿದ್ದು, ಅದನ್ನು ಸಾಕ್ಷಿ ನೋಡಿ ಗುರುತಿಸಿದ್ದಾರೆ. ಅದನ್ನು ನಿಪಿ–6 ಎಂದು ಗುರುತಿಸಲಾಯಿತು. ಅದರಲ್ಲಿರುವ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ, ಸಾಕ್ಷಿಯ ಸಹಿಯನ್ನು ನಿಪಿ–6(ಎ) ಎಂದು ಗುರುತಿಸಲಾಯಿತು. ಆಗ ಚಾಸಾ–18 ಮತ್ತು 19 ರವರು ಇದ್ದರು. ನಾನು ಪೊಲೀಸರಿಗೆ ಹಾಜರು ಪಡಿಸಿದ 14 ಪೈಬರ್ ಪೀಸ್ ಗಳನ್ನು ಹಾಗೂ ಇಂಡಿಕೇಟರನ್ನು ನೋಡಿದರೆ ಗುರುತಿಸುತ್ತೇನೆ ಎಂದು ಸಾಕ್ಷಿ ನೋಡಿ ಗುರುತಿಸಿದ್ದು, ಅವುಗಳನ್ನು ಕ್ರಮವಾಗಿ ಮು. ಮಾ–1 ಮತ್ತು ಮು. ಮಾ–2 ಎಂದು ಗುರುತಿಸಲಾಯಿತು.

ನಾನು ಕೊಟ್ಟ 14 ಪೈಬರ್ ಪೀಸ್ ಗಳನ್ನು ಮತ್ತು ಇಂಡಿಕೇಟರ್ ಅನ್ನು ಪೊಲೀಸರು ಠಾಣೆಯಲ್ಲಿ ನಿಂತಿದ್ದ ಬೊಲೇರೋ ಪಿಕಪ ವಾಹನ ಸಂಖ್ಯೆ ಕೆಎ–21 ಸಿ–6574 ವಾಹನಕ್ಕೆ ಪರಿಶೀಲಿಸಿ ನೋಡಿದಾಗ ಸದರಿ ಬೊಲೆರೋ ಪಿಕಪ್ ವಾಹನದ ಒಂದು ಇಂಡಿಕೇಟರ್ ಒಡೆದುಹೋಗಿತ್ತು ಹಾಗೂ ಇಂಡಿಕೇಟರ್ ಮೇಲೆ ಆಟೋ ಗೋಲ್ಡ್ ಎಂದು ಇತ್ತು, ನಾನು ಹಾಜರು ಪಡಿಸಿದ ಇಂಡಿಕೇಟರ್ ಮೇಲೂ ಆಟೋ ಗೋಲ್ಡ್ ಇತ್ತು . ಸದರಿ ಪಿಕಪ್ ವಾಹನಕ್ಕೆ ನಾನು ಪೊಲೀಸರಿಗೆ ನೀಡಿದ 14 ಪೈಬರ್ ಪೀಸ್ ಗಳನ್ನು ಜೋಡಿಸಿ ನೋಡಿದರು, ಆಗ ಅವುಗಳು ತಾಳೆಯಾಗಿರುತ್ತವೆ. ಸದರಿ ಬೊಲೆರೋ ವಾಹವನ್ನು ನೋಡಿದರೆ ಗುರುತಿಸುತ್ತೇನೆ ಎಂದು ಸಾಕ್ಷಿ ನೋಡಿ ಗುರುತಿಸಿದ್ದು, ಅವುಗಳನ್ನು ಈಗಾಗಲೇ ನಿಪಿ–1 ಮತ್ತು ನಿಪಿ–2 ಎಂದು ಗುರುತಿಸಲಾಗಿದೆ. ನನ್ನ ಸಂಬಂಧಿಯಾದ ಚಾಸಾ–6 ರವರು ಚಾಸಾ–2 ರವರೊಂದಿಗೆ ಮಾತನಾಡುವಾಗ, ಚಾಸಾ–2 ರವರು ಘಟನೆ ಯಾವ ರೀತಿ ಆಯಿತು ಎಂದು

ವಿವರಿಸಿರುತ್ತಾರೆ, ಚಾಸಾ–2 ರವರು ದಿಃ 06.09.2024 ರಂದು ತಾಳತ್ ಮನೆ ಎಂಬಲ್ಲಿ ಬರುವಾಗ ನನ್ನ ತಾಯಿ ಒಂದು ಬೊಲೇರೋ ವಾಹನದ ಮುಂದೆ ಬಿದ್ದು ಕೊಂಡಿದ್ದು, ಏಕೆ ಆ ರೀತಿ ಮಲಗಿದ್ದಾರೆ ಎಂದು ಅಲ್ಲಿದ್ದವರನ್ನು ಕೇಳಿದಾಗ ಅಲ್ಲಿದ್ದ ಯಾರೋ ವ್ಯಕ್ತಿಗಳು ಅನಂತ ಲಕ್ಷ್ಮಿ ಯವರು ಸಡನ್ ಆಗಿ ಪಿಕಪ್ ವಾಹನಕ್ಕೆ ಅಡ್ಡ ಬಂದು ಬಿಟ್ಟರು ಎಂದು ತಿಳಿಸಿದ್ದು, ಅವರು ಅವರನ್ನು ಮೇಲೆ ಎತ್ತಲು ಆಗುತ್ತಿಲ್ಲ ಎಂದು ಹೇಳಿ, ಆಗ ಎದುರಿನಿಂದ ಬರುತ್ತಿದ್ದ ಮತ್ತೊಂದು ವಾಹನದ ಕೆಲವು ವ್ಯಕ್ತಿಗಳನ್ನು ಅವರನ್ನು ಎತ್ತಿ ಆರೋಪಿಯ ಪಿಕಪ್ ವಾಹನದಲ್ಲಿ ಹಾಕಿ ಮಡಿಕೇರಿಯ ಜಿಲ್ಲಾ ಆಸ್ಪತ್ರೆಗೆ ಕರೆದುಕೊಂಡು ಹೋದರು ಎಂದು ಚಾಸಾ–2 ರವರು ಚಾಸಾ–6 ರವರಿಗೆ ತಿಳಿಸಿದ್ದು, ಚಾಸಾ–6 ರವರು ನನಗೆ ಈವಿಚಾರವನ್ನು ತಿಳಿಸಿರುತ್ತಾರೆ. ನಾನು ಪೊಲೀಸರ ಮುಂದೆ ಹೇಳಿಕೆ ನೀಡಿದ್ದೇನೆ.

ಪಾಟೀ ಸವಾಲುಃ – ಆರೋಪಿ ಪರ ವಕೀಲರಾದ ಶ್ರೀ. ಎಸ್ ಎ ಎಸ್ ರವರಿಂದಃ–

ಚಾಸಾ–1 ನನ್ನ ಸಂಬಂಧಿ ಎಂದರೆ ಸರಿ. ಚಾಸಾ–6 ರಿಂದ 9 ನಮ್ಮ ಅಕ್ಕಪಕ್ಕದ ಗ್ರಾಮಸ್ಥರು, ಅವರು ನನಗೆ ಗೊತ್ತು ಎಂದರೆ ಸರಿ. ಚಾಸಾ–3 ಮತ್ತು 4 ನಮ್ಮ ಪಕ್ಕದ ಗ್ರಾಮದವರು ಎಂದರೆ ಸರಿಯಲ್ಲ. ದಿಃ 06.09.2024 ರಂದು ನನಗೆ ನನ್ನ ದೊಡ್ಡಮ್ಮ ಮೀನಾಕ್ಷಿ ರವರು ದೂರವಾಣಿ ಕರೆ ಮಾಡಿ ವಿಚಾರ ತಿಳಿಸಿರುತ್ತಾರೆ. ನಾನು ಪೊಲೀಸರ ಮುಂದೆ ಏನು ಹೇಳಿಕೆ ನೀಡಿದ್ದೇನೆ ಎಂದು ನನಗೆ ಗೊತ್ತು . ನಾನು ಪೊಲೀಸರ ಮುಂದೆ ಯಾವುದೇ ಹೇಳಿಕೆ ನೀಡಿಲ್ಲ ಎಂದರೆ ಸರಿಯಲ್ಲ. ಚಾಸಾ–1 ರವರು ದೂರು ನೀಡುವ ಕಾಲಕ್ಕೆ ಮು. ಮಾ–1 ಮತ್ತು 2 ರ ಬಗ್ಗೆ ಹೇಳಲು ನನಗೆ ಯಾವುದೇ ತೊಂದರೆ ಇರಲಿಲ್ಲ. ಮು. ಮಾ–1 ಮತ್ತು 2 ರವರ ಬಗ್ಗೆ ಚಾಸಾ–1 ರವರಿಗೆ ಹೇಳಿ , ಆ ವಿಚಾರವನ್ನು ಚಾಸಾ–1 ರವರು ಪೊಲೀಸರಿಗ ತಿಳಿಸಲು ಯಾವುದೇ ತೊಂದರೆ ಇರಲಿಲ್ಲ ಎಂದರೆ ಸರಿ. ಅಪಘಾತ ಆಗಿತ್ತು ಎನ್ನುವ ಸ್ಥಳದಲ್ಲಿ ವಿದ್ಯುತ್ ದೀಪ ಇಲ್ಲ ಎಂದರೆ ಸರಿ. ನಾನು ಮೊಬೈಲನ್ನು ಉಪಯೋಗಿಸುತ್ತೇನೆ ಎಂದರೆ ಸರಿ. ನೀವು ನಿಮ್ಮ ಮುಖ್ಯ ವಿಚಾರಣೆಯಲ್ಲಿ ಹೇಳಿದ್ದೀರಾ ಕೃತ್ಯ ಸ್ಥಳಕ್ಕೆ ನೀವು ಹೋಗಿ ನೋಡಿದಾಗ ಅಲ್ಲಿ ನಿಮ್ಮ ತಾಯಿಯ ಚಪ್ಪಲಿ, ಹೂಗಳು, ಮು. ಮಾ–1 ಮತ್ತು 2 ಬಿದ್ದಿತ್ತು ಎಂದು ಹಾಗಾದರೆ ಆಗ ನಿಮ್ಮ ಮೊಬೈಲ್ ನಲ್ಲಿ ಸ್ಥಳದ ಫೊಟೋ ತೆಗೆಯಲು ತೊಂದರೆ ಇತ್ತಾ ಎಂದರೆ ಸಾಕ್ಷಿ ತೊಂದರೆ ಇರಲಿಲ್ಲ ಎನ್ನುತ್ತಾರೆ. ಮು. ಮಾ–1 ಮತ್ತು 2 ನ್ನು ಈ ಪ್ರಕರಣಕ್ಕಾಗಿ ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ. ದಿಃ 09.09.2024 ರಂದಾಗಲಿ, ದಿಃ 10.09.2024 ರಂದಾಗಲಿ ನಾನು ಪೊಲೀಸರಿಗೆ ಮು. ಮಾ– 1 ಮತ್ತು 2 ರ ಬಗ್ಗೆ ಹೇಳಿಲ್ಲ ಎಂದರೆ ಸರಿ. ನಾನು ಸದರಿ ದಿನಾಂಕಗಳಂದು ಪೊಲೀಸ್ ಠಾಣೆಗೆ

ಹೋಗಿದ್ದರೂ ಕೂಡ ಮು. ಮಾ- 1 ಮತ್ತು 2 ರ ಬಗ್ಗೆ ನಾನು ಹೇಳಿಲ್ಲ ಎಂದರೆ ಸರಿ. ನನ್ನ ತಾಯಿಯ ಚಪ್ಪಲಿಯನ್ನು ಪೊಲೀಸರಿಗೆ ಹಾಜರು ಪಡಿಸಿಲ್ಲ ಎಂದರೆ ಸರಿ. ಪೊಲೀಸರು ನಿಪಿ-6 ಮಾಡುವ ಕಾಲಕ್ಕೆ ಚಪ್ಪಲಿ, ಹೂವುಗಳನ್ನು ಅಮಾನತು ಪಡಿಸಿಕೊಂಡಿಲ್ಲ ಎಂದರೆ ಸರಿ. ಘಟನೆಯಾದ ಎರಡು ವಾರಗಳ ನಂತರ ನಿಪಿ-6 ಮಹಜರು ಬರೆಯಲಾಗಿದೆ ಎಂದರೆ ಸರಿ. ಸದರಿ ಬೊಲೆರೋ ವಾಹನದ ಮಾಲೀಕರು ಜಗದೀಶ್, ಸದರಿ ವಾಹನದ ದಾಖಲೆಗಳನ್ನು ನಾನು ನೋಡಿರುತ್ತೇನೆ. ನಾನು ನನ್ನ ಮೊಬೈಲ್ ನಲ್ಲಿ ಸದರಿ ವಾಹನದ ಮಾಲೀಕರ ಬಗ್ಗೆ ತಿಳಿದುಕೊಂಡಿರುತ್ತೇನೆ. ದಿಃ 28.09.2024 ರಂದು ನಿಪಿ-6 ರಂತೆ ಪೊಲೀಸರು ಮಹಜರು ಮಾಡಿಲ್ಲ, ಮು. ಮಾ-1 ಮತ್ತು 2 ನು ಅಮಾನತು ಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ನಿಪಿ-1 ಮತ್ತು 2 ರಲ್ಲಿ ಆರೋಪಿ ಕಾಣುತ್ತಿಲ್ಲ ಎಂದರೆ ಸರಿ. ನಿಪಿ-1 ರಲ್ಲಿ ಇರುವ ವ್ಯಕ್ತಿ ಸದರಿ ಬೊಲೆರೋ ವಾಹನದ ಮಾಲೀಕ ಎಂದರೆ ನನಗೆ ಗೊತ್ತಿಲ್ಲ. ಆರೋಪಿಗೂ ಸದರಿ ಬೊಲೆರೋ ವಾಹನಕ್ಕೂ ಯಾವುದೇ ಸಂಬಂಧ ಇಲ್ಲ ಎಂದರೆ ನನಗೆ ಗೊತ್ತಿಲ್ಲ. ನಿಪಿ-6 ಮಾಡುವ ಕಾಲಕ್ಕೆ ಪೊಲೀಸರು ಫೊಟೋ ತೆಗೆದಿರುತ್ತಾರೆ. ರಸ್ತೆಯ ಮೇಲೆ ಬಿದ್ದಿದ್ದ ನನ್ನ ತಾಯಿಯನ್ನು ಆರೋಪಿ ಕರೆದುಕೊಂಡು ಹೋಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಿರುತ್ತಾರೆಯೇ ಹೊರತು ಆರೋಪಿಗೂ ಈ ಪ್ರಕರಣಕ್ಕೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಚಾಸಾ-6 ರವರಿಗೆ ಚಾಸಾ-2 ರವರು ಪ್ರಕರಣದ ಬಗ್ಗೆ ಹೇಳಿದ್ದಾರೆ ಎಂದ ವಿಚಾರವನ್ನು ನಾನು ಕೇಳಿಸಿಕೊಂಡಿಲ್ಲ ಎಂದರೆ ಸರಿ. ನಾನು ಆರೋಪಿಯ ವಿರುದ್ದ ಸುಳ್ಳು ಪ್ರಕರಣ ದಾಖಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ – ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)

ಓ. ಹೇ. ಕೇ. ಸರಿ ಇದೆ.

ಸಹಿ/-

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ. ಎಂ. ಎಫ್. ಸಿ, ಮಡಿಕೇರಿ.